**<u>ದಿನಾಂಕಃ 13.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಆರೋಪಿ ಪರ ಶ್ರೀ. ಸಿ ಎಂ ಕೆ ವಕೀಲರಿಂದಃ-</u>**

1. ಪಿರ್ಯಾದುದಾರರು ನನಗೆ ಗೊತ್ತಿಲ್ಲ, ಪಿರ್ಯಾದುದಾರರ ತಾಯಿ ಹೇಮಲತಾ ನನಗೆ ಪರಿಚಯ, ಸದರಿಯವರು ನಮ್ಮ ಗ್ರಾಮದ ಹೆಣ್ಣು ಮಗಳು. 2015ನೇ ಇಸವಿಯಲ್ಲಿ ನಾನು ಹೇಮಲತಾರವರಿಂದ ರೂ. 20,000/- (ಇಪ್ಪತ್ತು ಸಾವಿರ )ಹಣವನ್ನು ಸಾಲವಾಗಿ ಪಡೆದುಕೊಂಡಿದೆ. ಸದರಿ 20 ಸಾವಿರ ಹಣವನ್ನು ಪಡೆದುಕೊಳ್ಳುವ ಸಲುವಾಗಿ ನಾನು ಹೇಮಲತಾ ರವರಿಗೆ ಈ ಕೇಸಿನ ಚೆಕ್ ನ್ನು 20ಸಾವಿರ ಹಣದ ಭದ್ರತೆಗಾಗಿ ನೀಡಿದ್ದೆ. 2016ರಲ್ಲಿ ಸದರಿ 20 ಸಾವಿರ ಹಣವನ್ನು ಹೇಮಲತಾ ರವರಿಗೆ ವಾಪಸ್ಸು ಕೊಟ್ಟಿರುತ್ತೇನೆ. ಸದರಿ ಹಣವನ್ನು ವಾಪಸ್ಸು ಕೊಟ್ಟ ನಂತರ ನಾನು ಹೇಮಲತಾರವರನ್ನು ನಾನು ಕೊಟ್ಟಿದ್ದ ಚೆಕ್ ನ್ನು ವಾಪಸ್ಸು ಕೊಡಿ ಎಂದು ಕೇಳಿದಾಗ ಸದರಿ ಚೆಕ್ ನ್ನು ಎಲ್ಲೋ ಇಟ್ಟಿದ್ದೇನೆ ಅದು ಸಿಕ್ಕ ನಂತರ ಕೊಡುತ್ತೇನೆ ಎಂದು ಹೇಳಿದ್ದರು. ಸದರಿ ಹೇಮಲತಾರವರು ನಮ್ಮ ಗ್ರಾಮದವರು ಮತ್ತು ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರಿಂದ ಅವರ ಮೇಲೆ ನಂಬಿಕೆ ಇಟ್ಟು ಚೆಕ್ ವಾಪಸ್ಸು ಕೊಡುತ್ತಾರೆ ಎಂದು ಸುಮ್ಮನೆ ಇದ್ದೆ. ನನ್ನ ವಿರುದ್ಧ ಕೇಸನ್ನು ದಾಖಲು ಮಾಡಿ ಪೊಲೀಸರು ನಮ್ಮ ಮನೆ ಹತ್ತಿರ ಬಂದಾಗ ಸದರಿ ಹೇಮಲತಾ ರವರು ತನ್ನ ಮಗನ ಮೂಲಕ ನಾನು ಕೊಟ್ಟಿದ್ದ ಚೆಕ್ ನ್ನು ದುರುಪಯೋಗ ಪಡಿಸಿಕೊಂಡು ನನ್ನ ವಿರುದ್ಧ 3 ಲಕ್ಷ ಹಣಕ್ಕೆ ಕೇಸು ದಾಖಲು ಮಾಡಿರುವ ವಿಚಾರ ಗೊತ್ತಾಗಿರುತ್ತದೆ. ಪೊಲೀಸರು ನ್ಯಾಯಾಲಯದಿಂದ ಸಮನ್ಸ್ ನ್ನು ನನಗೆ ತಲುಪಿಸಲು ಬರುವ ಪೂರ್ವದಲ್ಲಿ ಪಿರ್ಯಾದುದಾರರಿಂದ ಯಾವುದೇ ನೋಟೀಸ್ ಬಂದು ತಲುಪಿಲ್ಲ. ನನ್ನ ಹೆಸರು ನಾರಾಯಣ ಎಂ ಆರ್ ಬಿನ್ ರಾಮಸ್ವಾಮಿ, ನನ್ನ ತಂದೆ ರಾಮಸ್ವಾಮಿ 2013ರಲ್ಲಿ ಮರಣ ಹೊಂದಿರುತ್ತಾರೆ. 20 ಸಾವಿರ ಹಣದ ಭದ್ರತೆಗಾಗಿ ನಾನು ಹೇಮಲತಾರವರಿಗೆ ಈ ಕೇಸಿನ ಚೆಕ್ ನ್ನು ಕೊಟ್ಟಿದ್ದನ್ನು ನಾನು ಹಣವನ್ನು ಅವರಿಗೆ ವಾಪಸ್ಸು ಕೊಟ್ಟ ನಂತರವೂ ಚೆಕ್ ನ್ನು

ನನಗೆ ವಾಪಸ್ಸು ಕೊಡದೆ ದುರುಪಯೋಗ ಮಾಡಿಕೊಂಡು ತನ್ನ ಮಗನ ಮೂಲಕ ನನ್ನ ವಿರುದ್ಧ ಅಕ್ರಮ ಹಣ ವಸೂಲಾತಿಗೆ ಕೇಸ್ ದಾಖಲು ಮಾಡಿದ್ದು, ಈ ಕೇಸಿನಿಂದ ನನ್ನನ್ನು ಬಿಡುಗಡೆ ಮಾಡಬೇಕಾಗಿ ಕೋರುತ್ತೇನೆ.

**<u>ಪಾಟೀ ಸವಾಲುಃ</u> ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ
ನ್ಯಾಯಾಲಯ, ಚನ್ನಪಟ್ಟಣ